

1

ಸಾಹಿತ್ಯವಾದರೂ ಅಷ್ಟೆ, ಇತರ ಸಾಂಸ್ಕೃತಿಕ/ಕಲಾತ್ಮಕ ದಾಖಲೆಗಳಾದರೂ ಅಷ್ಟೆ, ಪ್ರಾಚೀನವು ನಮಗೆ ಇಂದು ಹೇಗೆ ಮತ್ತು ಯಾಕೆ ಮುಖ್ಯವೆಂದು ಕಂಡುಕೊಳ್ಳುವುದು ಬಹು ದೊಡ್ಡ ಸವಾಲು. ಹೀಗೆ ಮಾಡುವಾಗ ಹೊಟ್ಟು, ಜಳ್ಳುಗಳು ತೂರಿಹೋಗಿ ಗಟ್ಟಿ ಕಾಳುಗಳು ಉಳಿಯುತ್ತವೆ. ಈ ಕೆಲಸದಲ್ಲಿ ಸಾಹಿತ್ಯದ ಸೌಂದರ್ಯಾತ್ಮಕ ನೆಲೆಗಳ ಹಾಗೆಯೇ ಜೀವನಸಂಬಂಧಿಯಾದ ಸಂಗತಿಗಳು ಕೂಡ ಮುಖ್ಯವಾಗುತ್ತವೆ. ದೇಹ, ಮನಸ್ಸು ಮತ್ತು ಲೋಕಗಳ ಸರೆಮನೆಯಲ್ಲಿ ನೆಲೆಸಿರುವಾಗಲೂ ಅವೆಲ್ಲವನ್ನೂ ಮೀರುವ ಕನಸುಕಾಣುವ ಮನುಷ್ಯನ ಬಯಕೆಗಳಿಗೆ ಸ್ಪಂದಿಸುವ ಸಾಹಿತ್ಯ ದೇಶ–ಕಾಲಗಳ ಗಡಿಯನ್ನು ದಾಟುತ್ತದೆ. ಹಾಗೆಂದು, ಕಲೆಯೊಳಗೆ ಮತ್ತು ಅದರಾಚೆಗೆ ಅಡಗಿ ಕುಳಿತಿರುವ ಇತಿಹಾಸವು ನಮ್ಮ ತಲೆಯ ಮೇಲಿನ ಬಂಡೆಯಾಗಿ, ನಮ್ಮ